# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1704
ಸದಸ್ಯರ ಹೆಸರು : ಎನ್. ರವಿಕುಮಾರ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕೆಂಪೇಗೌಡ ಬಸ್ಸು ನಿಲ್ದಾಣ ಸೇರಿದಂತೆ ರಾಜ್ಯದ ಹೆಚ್ಚಿನ ಎಲ್ಲಾ ಬಸ್ಸು ನಿಲ್ದಾಣಗಳಲ್ಲಿ ಇರುವ ಆಹಾರೋತ್ಪನ್ನ ಮಳಿಗೆಗಳಲ್ಲಿ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅಂತಹ ಮಳಿಗೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆ/ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆದಿರುವ ಕುರಿತು 187 ಪ್ರಕರಣಗಳು ದಾಖಲಾಗಿದ್ದು, ಸಂಸ್ಥೆಗಳ ನಿಯಮಾವಳಿಯಂತೆ 175 ಪ್ರಕರಣಗಳಲ್ಲಿ ದಂಡ ವಿಧಿಸಿ, 12 ಪ್ರಕರಣಗಳಲ್ಲಿ ಎಚ್ಚರಿಕೆ ನೀಡಲಾಗಿದೆ. |
| ಆ. | ಸದರಿ ಮಳಿಗೆಗಳ ಲೈಸೆನ್ಸ್ ರದ್ದುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಸಾರಿಗೆ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಬಸ್ ನಿಲ್ದಾಣಗಳಲ್ಲಿನ ಯಾವುದೇ ಮಳಿಗೆಗಳ ಲೈಸೆನ್ಸ್‌ನ್ನು ರದ್ದುಪಡಿಸಿರುವುದಿಲ್ಲ. ಸದರಿ ಮಳಿಗೆಗಳ ಪರವಾನಗಿದಾರರಿಗೆ ನಿಯಮಾವಳಿಗಳನ್ವಯ ನೋಟಿಸ್/ದಂಡ/ ಎಚ್ಚರಿಕೆಗಳನ್ನು ನೀಡಲಾಗಿದೆ. |
| ಇ. | ಕಳೆದ 2 ವರ್ಷಗಳಲ್ಲಿ ಇಂತಹ ಎಷ್ಟು ಮಳಿಗೆಗಳ ಮೇಲ ದಾಳಿ ನಡೆಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು); | |
| ಈ. | ಸರ್ಕಾರಿ ಬಸ್ಸು ನಿಲ್ದಾಣಗಳಲ್ಲಿರುವ ಮಳಿಗೆಗಳಲ್ಲಿ ಅವಧಿ ಮುಗಿದ ಕಳಪೆ ಗುಣ ಮಟ್ಟದ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದು ಈ ಕುರಿತು ಕಳೆದ 2 ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲಿಸಿದೆ? (ಜಿಲ್ಲಾವಾರು ವಿವರ ನೀಡುವುದು)? | ಸಾರಿಗೆ ಸಂಸ್ಥೆಗಳು ಕಳೆದ 02 ವರ್ಷಗಳ ಅವಧಿಯಲ್ಲಿ ದಾಳಿ ನಡೆಸಿ, ಪ್ರಕರಣ ದಾಖಲಿಸಲಾದ ಜಿಲ್ಲಾವಾರು ವಿವರಗಳನ್ನು **'ಅನುಬಂಧ-ಅ'** ರಲ್ಲಿ ಒದಗಿಸಲಾಗಿದೆ ಮತ್ತು ನಿಗಮಗಳ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಕುರಿತು 21 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಜಿಲ್ಲಾವಾರು ವಿವರಗಳನ್ನು **'ಅನುಬಂಧ-ಆ'** ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಟಿಡಿ 95 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್ ರವಿಕುಮಾರ್ ರವರು ಪ್ರಶ್ನೆ**

ಅನುಬಂಧ - ಅ

| **ಕ್ರ.ಸಂಖ್ಯೆ** | **ನಿಗಮ / ಸಂಸ್ಥೆ** | **ಜಿಲ್ಲೆ** | **ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆದುಕೊಂಡಿರುವ ಬಗ್ಗೆ ದಾಖಲಾದ ಪ್ರಕರಣಗಳ ಸಂಖ್ಯೆ** |
|---|---|---|---|
| 1 | ಕ.ರಾ.ರ.ಸಾ ನಿಗಮ | ದಾವಣಗೆರೆ | 16 |
| | | ಬೆಂಗಳೂರು ನಗರ | 74 |
| | | ಹಾಸನ | 25 |
| | | ಚಿಕ್ಕಬಳ್ಳಾಪುರ | 3 |
| | | ಚಿಕ್ಕಮಗಳೂರು | 3 |
| | | ಚಿತ್ರದುರ್ಗ | 22 |
| | | ಮಡಿಕೇರಿ | 4 |
| | | ದಕ್ಷಿಣ ಕನ್ನಡ | 3 |
| | | ಉಡುಪಿ | 3 |
| | | ತುಮಕೂರು | 11 |
| | | ಮಂಡ್ಯ | 2 |
| 2 | ಬೆಂ.ಮ.ಸಾ ಸಂಸ್ಥೆ | ಬೆಂಗಳೂರು ನಗರ | 20 |
| 3 | ಕ.ಕ.ರ.ಸಾ ನಿಗಮ | ಬಳ್ಳಾರಿ | 1 |
| **ಒಟ್ಟು** | | | **187** |

ಕ.ರಾ.ರ.ಸಾ ನಿಗಮ : ಕೇಂದ್ರ ಕಛೇರಿ: ಬೆಂಗಳೂರು

ಅನುಬಂಧ - [illegible]

| ಕ್ರ ಸಂ | ನಿಗಮ | ಜಿಲ್ಲಾ | ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ |
|---|---|---|---|
| 1 | ಕರಾರಸಾ ನಿಗಮ | ದಾವಣಗೆರೆ | 1 |
| | | ಹಾಸನ | 2 |
| | | ಚಿಕ್ಕಬಳ್ಳಾಪುರ | 3 |
| | | ಬೆಂಗಳೂರು ನಗರ | 5 |
| | | ಚಿತ್ರದುರ್ಗ | 4 |
| | | ತುಮಕೂರು | 1 |
| 2 | ಬೆಂಮಸಾ ಸಂಸ್ಥೆ | ಬೆಂಗಳೂರು ನಗರ | 3 |
| 3 | ವಾಕರಸಾ ಸಂಸ್ಥೆ | ಧಾರವಾಡ | 2 |
| ಒಟ್ಟು ಪ್ರಕರಣ | | | 21 |